ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಮುಂಬಡ್ತಿ ಆದೇಶಗಳಲ್ಲಿನ ಗೊಂದಲಗಳು

ಶ್ರೀ ಆರ್. ಬಿ. ತಿಮ್ಮಾಪೂರ(ವಿಧಾನ ಸಭೆಯಿಂದ ಚುನಾಯಿತರಾದವರು) –

564 (490) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮುಂಬಡ್ತಿಯಲ್ಲಿ ಮೀಸಲಾತಿ ಸಂಬಂಧ ಪವಿತ್ರ ಪ್ರಕರಣಕ್ಕೂ ಮೊದಲು ಮತ್ತು ಸರ್ವೋಚ್ಛ ನ್ಯಾಯಾಲಯದ ಆದೇಶದ ನಂತರ ಹೊರಡಿಸದಲಾದ ಆದೇಶಗಳು ಯಾವುವು; (ಆದೇಶದ ಪ್ರತಿಗಳನ್ನು ಲಗತ್ತಿಸುವುದು)

(ಆ) ದಿನಾಂಕ : 13-04-1999ರ ಆದೇಶದಲ್ಲಿ ಪ್ರಾತಿನಿಧ್ಯ ಪ್ರಮಾಣವನ್ನು ಅನುಸರಿಸುವಂತೆ ತಿಳಿಸಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಭಿಪ್ರಾಯ ನೀಡುವಾಗ ಬಡ್ತಿ ಬಿಂದುಗಳನ್ನೇ ಅನುಸರಿಸಬೇಕೆಂಬ ಗೊಂದಲ ಮೂಡಿಸುತ್ತಿರುವುದು ಸೂಕ್ತವೇ;

(ಇ) ಪ್ರಾತಿನಿಧ್ಯ ಪ್ರಮಾಣದನ್ವಯ ಪವಿತ್ರ ಪ್ರಕರಣಕ್ಕೂ ಮೊದಲೇ ಮುಂಬಡ್ತಿ ಹೊಂದಿದ್ದು, ಪವಿತ್ರ ಪ್ರಕರಣದ ನಂತರ ಮುಂಬಡ್ತಿ ಅಂದರೆ, ಸರ್ವೋಚ್ಛ ನ್ಯಾಯಾಲಯದ ಆದೇಶದ ನಂತರ ಜ್ಯೇಷ್ಠತೆಯ ಯಥಾಸ್ಥಿತಿಯನ್ನು ಕಾಪಾಡಿ, ಮುಂದಿನ ಹುದ್ದೆಗೆ ಮುಂಬಡ್ತಿ ನೀಡದೆ, ಹಿಂದಿನ ಜ್ಯೇಷ್ಠತೆಯಿಂದ ಕೆಳಗೆ ಇಳಿಸಿ ಸಾಮಾನ್ಯ ವರ್ಗದವರನ್ನು ಮುಂಬಡ್ತಿಗೆ ಪರಿಗಣಿಸಿರುವುದು ಸರಿಯೇ;

(ಈ) ಯಾವುದೇ ಒಂದು ವೃಂದದಲ್ಲಿ ಅರ್ಹತೆ ಇದ್ದರೂ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿಯವರ ಶೇಕಡಾ 15ರ ಪ್ರಾತಿನಿಧ್ಯ ಉಳಿಸಿಕೊಳ್ಳದೆ, ರೋಸ್ಟರ್ನ ಎಲ್ಲಾ ಬಿಂದುಗಳಿಗೂ ಸಾಮಾನ್ಯ ವರ್ಗದವರಿಗೆ ಮುಂಬಡ್ತಿಗಳನ್ನು ನೀಡುತ್ತಾ ಹೋಗಬಹುದೇ; ಇದರಿಂದ ಪರಿಶಿಷ್ಟ ಜನಾಂಗದ ನೌಕರರಿಗೆ ಅನ್ಯಾಯವಾಗುವುದಿಲ್ಲವೇ?